<u>2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.2638/2014
ಸಿಡಬ್ಲ್ಯೂ.1 ಪಿಡಬ್ಲ್ಯೂ1

| | | |
|---|---|---|
| ಸಾಕ್ಷಿಯ ಹೆಸರು | - | ಲಕ್ಷ್ಮಣ ರಾಯಪ್ಪಾ ಜೋಡಟ್ಟಿ |
| ವಯಸ್ಸು | - | 48 ವರ್ಷ |
| ಉದ್ಯೋಗ | - | ಒಕಕಲುತನ |
| ವಾಸ | - | ಖನದಾಳ ತಾಃ ರಾಯಬಾಗ |

<u>ದಿನಾಂಕಃ 18-04-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆ : ಮಾನ್ಯ.ಸ.ಸ.ಅ.ರವರಿಂದಃ</u>**

ಆರೋಪಿತರ ಪರಿಚಯ ಇದೆ. ಅವರು ನನ್ನ ಸಂಬಂಧಿಕರು. 1 ನೇ ಆರೋಪಿ ನನ್ನ ಅಣ್ಣನಿರುತ್ತಾನೆ, 2 ನೇ ಆರೋಪಿ ನನ್ನ ಅತ್ತಿಗೆ ಇರುತ್ತಾಳೆ, 3 ನೇ ಆರೋಪಿ ಅವರ ಮಗನಿರುತ್ತಾನೆ. ದಿಃ 26-04-2014 ರಂದು ಸುಮಾರು ಬೆಳಿಗ್ಗೆ 8-00 ಗಂಟೆಗೆ ನಾನು ಹೊಲದಲ್ಲಿದ್ದಾಗ ಬಾವಿಯ ಮೋಟರನ್ನು ಸ್ಟಾಟ ಮಾಡಿದಾಗ ಆರೋಪಿತರು ಬಂದು ಮೋಟರನ್ನು ಬಂದ ಮಾಡಿದ್ದರು. ನಾನು ಮರಳಿ ಚಾಲು ಮಾಡಲು ಹೋದಾಗ ನನಗೆ ಅವಾಚ್ಯವಾಗಿ ಬೈದು ಸಿಕ್ಕ ಸಿಕ್ಕಲ್ಲಿ ಹೊಡೆ ಬಡಿ ಮಾಡಿ ಕಲ್ಲಿನಿಂದ ಮುಖಕ್ಕೆ ಜಜ್ಜಿದರು. ನಂತರ ನನ್ನನ್ನು ಕೊಲ್ಲಲು ಪ್ರಯತ್ನಿಸಿದರು. ನಮ್ಮ ಹೊಲ ಮಾಡಿದವರು ಚಾಸಾ-5 ಮತ್ತು 6 ಬಂದು ನನಗೆ ಆರೋಪಿತರು ಬಡಿಯುವದನ್ನು ಬಿಡಿಸಿಕೊಂಡರು. ನಂತರ ನಾನು ಗೋಕಾಕ ಸರಕಾರಿ ಆಸ್ಪತ್ರೆಗೆ ಹೋಗಿ ಒಂದು ದಿನ ದಾಖಲಾಗಿದ್ದೇನು. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಪೋಲಿಸರು ಬಂದಿದ್ದು, ಆಸ್ಪತ್ರೆಯಲ್ಲಿಯೇ ಆರೋಪಿತರ ವಿರುದ್ಧ ದೂರನ್ನು ನೀಡಿರುತ್ತೇನೆ. ನಂತರ ಪೋಲಿಸರು ಅಪರಾಧ ಸ್ಥಳಕ್ಕೆ ಬಂದಿದ್ದು ನಾನು ಆ ಕಾಲಕ್ಕೆ ಹಾಜರಿದ್ದು ಅವರಿಗೆ ಅಪರಾಧ ಸ್ಥಳವನ್ನು ತೋರಿಸಿ ಮೈಮೇಲಿದ್ದ ರಕ್ತ ಹತ್ತಿದ್ದ ಅಂಗಿಯನ್ನು ಹಾಜರಪರಿಸಿರುತ್ತೇನೆ. ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸ.ಸ.ಅ. ರವರು ಸವಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ

<u>2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.8698/2022
ಸಿಡಬ್ಲ್ಯೂ.4 ಪಿಡಬ್ಲ್ಯೂ2

| | | |
|---|---|---|
| ಸಾಕ್ಷಿಯ ಹೆಸರು | - | ಶ್ರಿದೇವಿ ಗಣೇಶ ಕರನಿಂಗ |
| ವಯಸ್ಸು | - | 31 ವರ್ಷ |
| ಉದ್ಯೋಗ | - | ಮನೆಗೆಲಸ |
| ವಾಸ | - | ಕೊಣ್ಣೂರ |

<u>ದಿನಾಂಕಃ 25-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆ : ಮಾನ್ಯ.ಸ.ಸ.ಅ.ರವರಿಂದಃ</u>**

ಚಾಸಾ-1 ನಮ್ಮ ಓಣಿಯವರು. ಆರೋಪಿತನ ಪರಿಚಯ ಇದೆ. ಆರೋಪಿ ನನಗೆ ಹೊಡೆ ಬಡಿ ಮಾಡಿರುವುದಿಲ್ಲ, ಸೀರೆ ಹಿಡಿದು ಎಳೆದಾಡಿರುವುದಿಲ್ಲ, ಅವಾಚ್ಯವಾಗಿ ನಿಂದಿಸಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ ಅವರ ಮನೆಯ ಗ್ಲಾಸನ್ನು ಕಲ್ಲಿನಿಂದ ಒಗೆದು ಹೊಡೆದು ಲುಕ್ಷಾಣ ಮಾಡಿರುವುದಿಲ್ಲ. ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ.ಸ.ಸ.ಅ.ರವರಿಂದಃ</u>**

ದಿಃ 23-05-2022 ರಂದು ರಾತ್ರಿ 10-30 ಗಂಟೆಗೆ ನಾನು ನಮ್ಮ ಮನೆಯಲ್ಲಿದ್ದಾಗ ಆರೋಪಿತನು ನಮ್ಮ ಮನೆಗಯ ಮುಂದೆ ಬಂದು ನೀನು ನಮ್ಮ ತಾಯಿಯ ಉಸಾಬರಿ ಯಾಕ ಮಾಡಕತಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಆರೋಪಿತನು ನನಗೆ ಹೊಡೆ ಬಡಿ ಮಾಡಿ ನನ್ನ ಸೀರೆ ಹಿಡಿದು ಎಳೆದಾಡಿ ಮತ್ತು ನನ್ನ ಮನೆಯ ಗ್ಲಾಸನ್ನು ಕಲ್ಲಿನಿಂದ ಹೊಡೆದು ಲುಕ್ಷಾಣ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆಗ ಸ್ಥಳದಲ್ಲಿ ಜನರು ಸೇರಲು ಆರೋಪಿಯು ಅಲ್ಲಿಂದ ಹೊಗುವಾಗ ಜೀವದ ಬೆದರಿಕೆ ಹಾಕಿ ಹೋದನು ಎಂದರೆ ಸರಿಯಲ್ಲ. ಸದರಿ ಘಟನೆಯನ್ನು ನಮ್ಮ ಮನೆಯ ಪಕ್ಕದವರಾದ ಚಾಸಾ-5, ಚಾಸಾ-6 ಹಾಗು ಚಾಸಾ-1 ರವರು ನೋಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ಆರೋಪಿಯ ವಿರುದ್ಧ ಚಾಸಾ-1 ರವರು ನನ್ನ ಪರವಾಗಿ ಪೊಲೀಸರಿಗೆ ನಿಪಿ-1 ರಂತೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ದಿಃ28-05-2022 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಈಗ ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ